© Ph. : 27682035

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ವಿ.ಜಿ. ಕಾಂಪ್ಲೆಕ್ಸ್, 1ನೇ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.
ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

ಸಂ. ಬಿಐಎಎಪಿಎ/ಟಿಪಿ1/ಸಿಸಿ/16/2015-16/ 92 ದಿನಾಂಕ: 27 APR 2016

## "ಪ್ರಾರಂಭಿಕ ಪ್ರಮಾಣ ಪತ್ರ"

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರನ್ವಯ)
(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳು 1965 ರ ನಿಯಮ 30 ನಮೂನೆ 3 ರನ್ವಯ)

ವಿಷಯ : ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ನವರತ್ನಅಗ್ರಹಾರ ಗ್ರಾಮದ ಸರ್ವೆ ನಂ. 7/1 ಮತ್ತು 20 ಗಳಲ್ಲಿ ಒಟ್ಟಾರೆಯಾಗಿ ಅನುಮೋದಿಸಲಾಗಿರುವ ಅಭಿವೃದ್ಧಿ ನಕ್ಷೆಯಲ್ಲಿನ ಖಾತಾ ಸಂಖ್ಯೆ 82/2-97/2 ರ ಪ್ರದೇಶದಲ್ಲಿ ವಸತಿ ಉಪಯೋಗದ "ಬಿಲ್ಡಿಂಗ್ -1 (ಬ್ಲಾಕ್ ಸಿ ಅಂಡ್ ಡಿ)" ರ ಕಟ್ಟಡಕ್ಕೆ ಅನುಮತಿ ನೀಡಲಾಗಿದ್ದು, ಸದರಿ ನಕ್ಷೆಯ ಜೊತೆಗೆ ಹೆಚ್ಚುವರಿಯಾಗಿ ಅಂದರೆ ಅಭಿವೃದ್ಧಿ ನಕ್ಷೆಯ ಒಟ್ಟಾರೆ ಪ್ರದೇಶದ ಖಾತಾ ಸಂಖ್ಯೆ 82/2-97/2, 3 ರಲ್ಲಿ ಬಿಲ್ಡಿಂಗ್-1 [ಬ್ಲಾಕ್-ಎ (ಸಿ ಅಂಡ್ ಡಿ)] & ಬಿಲ್ಡಿಂಗ್-2 ಮತ್ತು ಬ್ಲಾಕ್-ಬಿ (ಕಮರ್ಷಿಯಲ್) ಕಟ್ಟಡವನ್ನು ಕಟ್ಟುವ ಸಲುವಾಗಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಮನವಿಯ ಬಗ್ಗೆ.

| | | |
|---|---|---|
| ಉಲ್ಲೇಖ : | 1) ಅರ್ಜಿದಾರರ ಮನವಿ ಪತ್ರ ದಿನಾಂಕ: | 18-11-2015 |
| | 2) ಈ ಪ್ರಾಧಿಕಾರದ ಸಭೆಯ ದಿನಾಂಕ: | ದಿನಾಂಕ: 02-01-2016 ರಂದು ನಡೆದ ಪ್ರಾಧಿಕಾರದ 111 ನೇ ಸಭೆಯ ವಿಷಯ ಸಂಖ್ಯೆ 111 [7ಬಿ(3)] ರಲ್ಲಿ ಕೈಗೊಂಡ ನಿರ್ಣಯ. |
| | 3) ಈ ಪ್ರಾಧಿಕಾರದ ಸಮ ಸಂಖ್ಯೆಯ ಪತ್ರ ದಿನಾಂಕ | 12-01-2016 |
| | 4) ಪ್ರಾಧಿಕಾರಕ್ಕೆ ಶುಲ್ಕವನ್ನು ಪಾವತಿಸಿರುವ ವಿವರ | ಅರ್ಜಿದಾರರು ದಿನಾಂಕ: 03-03-2016 ಮನವಿ ಪತ್ರದೊಂದಿಗೆ ಸಲ್ಲಿಸಿರುವ ಎಕ್ಸಿಸ್ ಬ್ಯಾಂಕ್, ವೈಟ್‌ಫೀಲ್ಡ್ ಶಾಖೆ, ಬೆಂಗಳೂರು ಇಲ್ಲಿನ ದಿನಾಂಕ: 01-03-2016 ರ ಡಿ.ಡಿ. ಸಂಖ್ಯೆ 001727 ರಲ್ಲಿ ರೂ.3,40,000-00 (ಮೂರು ಲಕ್ಷದ ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಮತ್ತು ಡಿ.ಡಿ. ಸಂಖ್ಯೆ 001726 ರಲ್ಲಿ ರೂ. 52,98,000-00 (ಐವತ್ತೆರಡು ಲಕ್ಷದ ತೊಂಬತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಒಟ್ಟು 56,38,000/- ಗಳನ್ನು ಪಾವತಿಸಲಾಗಿದೆ. |

Housiey.com

| | |
|---|---|
| 5) ಅಗ್ನಿಶಾಮಕ ಇಲಾಖೆ ರವರಿಂದ ಪಡೆದಿರುವ ನಿರಾಕ್ಷೇಪಣಾ ಪತ್ರ ಪತ್ರ ಹಾಗೂ ಇತರೆ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಿದ ದಿನಾಂಕ | 15-03-2016 |
| 6) ಸ್ಟ್ರಕ್ಚರಲ್ ಸ್ಟೆಬಿಲಿಟಿ ಸರ್ಟಿಫಿಕೇಟ್ ಹಾಗೂ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿದ ದಿನಾಂಕ | 27-04-2016 |

*******

**ಶ್ರೀ ಗೌತಮ್ ಯು ನಂಬೀಸನ್** ಇವರು ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ನವರತ್ನಅಗ್ರಹಾರ ಗ್ರಾಮದ ಸರ್ವೆ ನಂ. 7/1 ಮತ್ತು 20 ಗಳಲ್ಲಿ ಒಟ್ಟಾರೆಯಾಗಿ ಅನುಮೋದಿಸಲಾಗಿರುವ ಅಭಿವೃದ್ಧಿ ನಕ್ಷೆಯಲ್ಲಿನ ಖಾತಾ ಸಂಖ್ಯೆ 82/2-97/2 ರ ಪ್ರದೇಶದಲ್ಲಿ ವಸತಿ ಉಪಯೋಗದ "ಬಿಲ್ಡಿಂಗ್ -1 (ಬ್ಲಾಕ್ ಸಿ ಅಂಡ್ ಡಿ)" ರ ಕಟ್ಟಡಕ್ಕೆ ಅನುಮತಿ ನೀಡಲಾಗಿದ್ದು, *ಸದರಿ ನಕ್ಷೆಯ ಜೊತೆಗೆ ಹೆಚ್ಚುವರಿಯಾಗಿ ಅಂದರೆ ಅಭಿವೃದ್ಧಿ ನಕ್ಷೆಯ ಒಟ್ಟಾರೆ ಪ್ರದೇಶದ ಖಾತಾ ಸಂಖ್ಯೆ 82/2-97/2, 3 ರಲ್ಲಿ ಬಿಲ್ಡಿಂಗ್-1 [ಬ್ಲಾಕ್-ಎ (ಸಿ ಅಂಡ್ ಡಿ)] & ಬಿಲ್ಡಿಂಗ್-2 ಮತ್ತು ಬ್ಲಾಕ್-ಬಿ (ಕಮರ್ಷಿಯಲ್) ಕಟ್ಟಡವನ್ನು ಕಟ್ಟುವ ಸಲುವಾಗಿ* ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ನೀಡಲು ಕೋರಿ ಉಲ್ಲೇಖ (1) ರಂತೆ ಅರ್ಜಿ ಸಲ್ಲಿಸಿದ್ದು, ಸಲ್ಲಿಸಿರುವ ಕಟ್ಟಡ ನಕ್ಷೆಯು ವಲಯ ನಿಯಮಾವಳಿಗಳನ್ವಯ ಸೂಕ್ತವಾಗಿರುವ ಕಾರಣ, ಉಲ್ಲೇಖ (2) ರ ದಿನಾಂಕ: 02-01-2016 ರಂದು ನಡೆದ ಪ್ರಾಧಿಕಾರದ 111 ನೇ ಸಭೆಯ ವಿಷಯ ಸಂಖ್ಯೆ 111 [7ಬಿ(3)] ರಲ್ಲಿ ಮಂಡಿಸಲಾಗಿದ್ದು, ಸಭೆಯಲ್ಲಿ ಪ್ರಸ್ತಾವನೆಗೆ ಅನುಮೋದನೆ ನೀಡಲು ನಿರ್ಣಯಿಸಲಾಗಿರುತ್ತದೆ.

ಸಭೆಯ ನಿರ್ಣಯದನ್ವಯ ಉಲ್ಲೇಖ (3) ರ ಪ್ರಾಧಿಕಾರದ ಪತ್ರದಲ್ಲಿ ಕಟ್ಟಡ ನಕ್ಷೆ ಅನುಮೋದನೆ ಸಂಬಂಧ ಶುಲ್ಕ ಪಾವತಿಸಲು ಹಾಗೂ ವಿವಿಧ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರವನ್ನು ಹಾಗೂ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಪಡೆದು ಸಲ್ಲಿಸಲು ಸೂಚಿಸಲಾಗಿದ್ದು, ಅದರಂತೆ, ಉಲ್ಲೇಖ (4) ರಂತೆ ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ ಹಾಗೂ ಉಲ್ಲೇಖ (5) ರಂತೆ ಅಗ್ನಿಶಾಮಕ ಇಲಾಖೆ ರವರಿಂದ ಪಡೆದಿರುವ ನಿರಾಕ್ಷೇಪಣಾ ಪತ್ರ ಹಾಗೂ ಇತರೆ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಿರುತ್ತಾರೆ. ಉಲ್ಲೇಖ (6) ರ ಮನವಿ ಪತ್ರದೊಂದಿಗೆ ಸ್ಟ್ರಕ್ಚರಲ್ ಸ್ಟೆಬಿಲಿಟಿ ಸರ್ಟಿಫಿಕೇಟ್ ಮತ್ತು ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಗಿನ ನಿಬಂಧನೆಗಳಿಗೊಂದಿಗೆ ನೀಡಲಾಗಿದೆ.

## ನಿಬಂಧನೆಗಳು

1. ಯೋಜಿಸಿರುವ ಕಟ್ಟಡವನ್ನು *"ವಸತಿ"* ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಬೇಕು.
2. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ ದಿನಾಂಕ:27-04-2016 ರಿಂದ 26-04-2018 ರವರೆಗೆ ಮಾತ್ರ ನೀಡಲಾಗಿರುತ್ತದೆ.
3. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಆಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು ದೊಡ್ಡಜಾಲ ಗ್ರಾಮ ಪಂಚಾಯ್ತಿಯಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.

© Ph. : 27682035

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ವಿ.ಜಿ. ಕಾಂಪ್ಲೆಕ್ಸ್, 1ನೇ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.
ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

4. ಕಟ್ಟಡ ಕಟ್ಟಲು ಪರವಾನಿಗೆಯನ್ನು ದೊಡ್ಡಜಾಲ ಗ್ರಾಮ ಪಂಚಾಯ್ತಿಯಿಂದ ಪಡೆಯಬೇಕು.

5. ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ಕಟ್ಟಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.

6. "ವಸತಿ" ಉಪಯೋಗಕ್ಕೆ ಕಟ್ಟಡ ಕಟ್ಟಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ಕಟ್ಟತಕ್ಕದ್ದು ಮತ್ತು ಹಾಲಿರಸ್ತೆಯು ಜಿಲ್ಲಾ ಮುಖ್ಯ ರಸ್ತೆ/ರಾಜ್ಯ/ರಾಷ್ಟ್ರೀಯ ಹೆದ್ದಾರಿ ರಸ್ತೆಯಾಗಿದ್ದಲ್ಲಿ ಹೆದ್ದಾರಿಯ ಮಧ್ಯಭಾಗದಿಂದ ನಿಯಮಾವಳಿಯಂತೆ ಜಾಗವನ್ನು ಬಿಟ್ಟು ಕಟ್ಟತಕ್ಕದ್ದು.

7. ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.

8. ಕಟ್ಟಡ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.

9. ಪ್ರಸ್ತಾವನೆ ಸಂಬಂಧ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: AAI/BIA/ATM/NOC/BIAL/SOUTH/B/101414/67545/2470-74 ದಿನಾಂಕ:02-12-2014 ರಲ್ಲಿ ವಿಧಿಸ-ಲಾಗಿರುವ ನಿಬಂಧನೆಗಳಿಗೊಂದಿಗೆ ಷರತ್ತಿಗೆ ಬದ್ಧರಾಗಿರತಕ್ಕದ್ದು.

10. ಪ್ರಸ್ತಾವನೆ ಸಂಬಂಧ ಅಗ್ನಿಶಾಮಕ ಇಲಾಖೆ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: GBC (1) 276/2015 ದಿನಾಂಕ: 17-02-2016 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

11. ಪ್ರಸ್ತಾವನೆ ಸಂಬಂಧ ಬೆಸ್ಕಾಂರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: CEBRAZ/SEO/AEE-1/F-2377/15-16/4502-03 ದಿನಾಂಕ: 21-10-2015 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

12. ಪ್ರಸ್ತಾವನೆ ಸಂಬಂಧ ಬಿಎಸ್‌ಎನ್‌ಎಲ್‌ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: PLG-6/885/2014-15/CP/NOC/92 ದಿನಾಂಕ: 18-12-2014 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

13. ಪ್ರಸ್ತಾವನೆ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: PCB/175/CNP/15/H 1077 ದಿನಾಂಕ: 16-11-2015 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

14. ಪ್ರಸ್ತಾವನೆ ಸಂಬಂಧ ಸ್ಟೇಟ್ ಲೆವೆಲ್ ಎನ್‌ವಿರಾನ್‌ಮೆಂಟ್ ಇಂಫಾಕ್ಟ್ ಅಸೆಸ್‌ಮೆಂಟ್ ಅಥಾರಿಟಿ-ಕರ್ನಾಟಕ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: SEIAA 135 CON 2015 ದಿನಾಂಕ: 16-02-2016 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

15. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.

16. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.

17. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ನಕ್ಷೆಯು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

18. ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.

19. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.

20. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷ ಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

21. ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಸಹ ಪಡೆಯತಕ್ಕದ್ದು.

22. ನೀವು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಫೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರವು ತಂತಾನೆ ರದ್ದಾಗುತ್ತದೆ.

ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

*ಇವರಿಗೆ:*

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು,
ದೊಡ್ಡಜಾಲ ಗ್ರಾಮ ಪಂಚಾಯಿತಿ,
ಜಾಲ ಹೋಬಳಿ,
ಬೆಂಗಳೂರು ಉತ್ತರ (ಅಪರ) ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ
} ಕಟ್ಟಡ ನಕ್ಷೆಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

*ಪ್ರತಿಯನ್ನು :*

ಶ್ರೀ **ಗೌತಮ್ ಯು ನಂಬೀಸನ್**, ನಂ.7, ಹತ್ತನೇ ಮಹಡಿ, ಗಮ್ಮ ಬ್ಲಾಕ್, ಸಿಗ್ಮಾ ಟೆಕ್‌ಪಾರ್ಕ್, ನಂ.7, ವೈಟ್‌ಫೀಲ್ಡ್ ರಸ್ತೆ, ಬೆಂಗಳೂರು 560 066 ಮಾಹಿತಿಗಾಗಿ.

# ಮನೆ ಕಟ್ಟಡದ ಅನುಮತಿ ಪತ್ರ

ಸಂ. 01/2017-18
ದಿನಾಂಕ 4/5/17

ನಂ. 9 ತಾ॥ 04/05/2017

ದೊಡ್ಡಜಾಲ ಗ್ರಾಮ ........ ಪಂಚಾಯಿತಿ ಕಛೇರಿಯಿಂದ

ಜಾಲ ........ ಹೋಬಳಿ ........ ಗ್ರಾಮದ

ಶ್ರೀ. ........ ಗೆ

ನಿಮ್ಮ ಸ.ನಂ. - 71 & 20 ನೇ ಮರ್ಕ್ಯಂನ ಮನೆ ಕಟ್ಟುವ ಅನುಮತಿ ಅರ್ಜಿ ಬಾಬ್ತು

ಖಾ.ನಂ. - 82/2 - 97/2 & 82/3 - 97/3 ನಂಬರಿನಲ್ಲಿ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಮನೆ ಕಟ್ಟಿಕೊಳ್ಳಲು ಅಪ್ಪಣೆ ಮಾಡಿದೆ

## ಮನೆ ಕಟ್ಟುವ ಜಾಗಕ್ಕೆ ಚಕ್ಕುಬಂದಿ

ಪೂರ್ವ........ ಪಶ್ಚಿಮ........

ಉತ್ತರ........ ದಕ್ಷಿಣ........

ವಾಯಿದೆ ಮುಗಿಯುವ ತಾ॥........

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ / ಅಧ್ಯಕ್ಷರು
ದೊಡ್ಡಜಾಲ ಗ್ರಾಮ ಪಂಚಾಯಿತಿ
ಬೆಂಗಳೂರು ಉತ್ತರ ತಾಲ್ಲೂಕು.

### ಷರತ್ತುಗಳು

1) ಹಳೇ ಮನೆ ಕಟ್ಟುವಾಗ ಅಥವಾ ಹೊಸ ಮನೆ ಕಟ್ಟುವಾಗ ರಸ್ತೆಗೆ 5 ಅಡಿ ಬಿಟ್ಟು ಕಟ್ಟಬೇಕು. 2) ಬೀದಿ ಅಗಲ 15 ಅಡಿಗಿಂತ ಅಗಲವಾಗಿದ್ದರೂ ಬಾಜು ಮನೆಗಳಿಗಿಂತ ಮುಂದಕ್ಕೆ ಬಾರದಂತೆ ಕಟ್ಟಬೇಕು. 3) ಮನೆಗೆ ಬೀದಿ ಕಡೆ 1 ಬಾಗಿಲು ಹಿತ್ತಲ ಕಡೆ 1 ಬಾಗಿಲು ಇಟ್ಟಿರಬೇಕು. 4) ಮನೆಯ ನೆಲವು ನೆಲಮಟ್ಟಕ್ಕಿಂತಲೂ ಕನಿಷ್ಟಪಕ್ಷ 1 ಅಡಿ ಎತ್ತರವಾಗಿರಬೇಕು ಮತ್ತು ಮೇಲ್ಛಾವಣಿಯು ನೆಲಮಟ್ಟಕ್ಕಿಂತ 8 ಅಡಿ ಎತ್ತರಕ್ಕಿಂತ ಕಡಿಮೆ ಇರಕೂಡದು 5) ಮನೆ ನೀರು ಹೊರಗೆ ಹೋಗಲು ದಾರಿ ಮಾಡಿರಬೇಕು. 6) ಮನೆಗೆ ಗಾಳಿ ಬೆಳಕು ಚೆನ್ನಾಗಿ ಬರುವಂತೆ ನೆಲಮಟ್ಟದಿಂದ 3 ಅಡಿ ಎತ್ತರಕ್ಕೆ ಮೀರದಂತೆ 1ಕ್ಕೆ 2 Xಅಡಿಗಳಿಗೆ ಕಡಿಮೆ ಇಲ್ಲದಂತೆ ಒಂದೊಂದು ಕಿಟಕಿಯನ್ನು ಎದುರು ಬದರಾಗಿಡಬೇಕು 7)ಮನೆ ಕಟ್ಟುವ ಸ್ಥಳಕ್ಕೆ ಸಿವಿಲ್ ಸ್ವಭಾವದ ವ್ಯವಹಾರವಿದ್ದಲ್ಲಿ ನಾವು ಜವಾಬ್ದಾರರಲ್ಲ, 8) ಈ ಲೈಸನ್ಸ್ ಈ ಲಾಗಾಯ್ತು 6 ತಿಂಗಳು ಜಾರಿಯಲ್ಲಿದ್ದು ನಂತರ ರದ್ದೆಂದು ಭಾವಿಸತಕ್ಕದ್ದು. 9) ಇದಕ್ಕೆ ವಿರೋಧವಾಗಿ ನಡೆದಲ್ಲಿ ಪಂಚಾಯ್ತಿ ನಿಬಂಧನೆ ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುತ್ತೆ. 10) ವಾಯಿದೆ ಬಡಾಯಿಸಿಕೊಳ್ಳಲು ಅಪ್ಪಣೆ ಪಡೆಯಬೇಕು. 11) ಮನೆಯ ಸೂರು ಯಾವ ಹೊರಬೀದಿಯ ಚರಂಡಿಗಿಂತಲೂ ಮುಂದಕ್ಕೆ ಬಂದಿರಕೂಡದು. 12) ಮನೆಯ ನೀರನ್ನು ಹೊರಕ್ಕೆ ಬಿಡುವಾಗ ಈ ನೀರು ಹೋಗುವುದನ್ನು ಇಟ್ಟಿಗೆ ಕಲ್ಲುಗಾರೆ ಸಿಮೆಂಟಿನಿಂದ ಚರಂಡಿಗಳನ್ನು ರೋಡಿನಿಂದ ಚರಂಡಿವರೆಗೂ ಕಟ್ಟಬೇಕು ಮತ್ತು ಅವುಗಳನ್ನು ಆಗಾಗ್ಗೆ ರಿಪೇರಿ ಮಾಡುತ್ತಿರಬೇಕು. 13) ಹುಲ್ಲು ಚಾವಣಿಯಿಂದ ಮನೆಗಳನ್ನು ಕಡ್ಡಕೂಡದು.